7. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

1. **ವಿಷಯ :** ಗ್ರಾಮೀಣ ಪ್ರದೇಶಗಳಲ್ಲಿ ಕಾನೂನುಬಾಹಿರವಾಗಿ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) :– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಸುಮಾರು 3,949 CL-II ಬಾರ್ ಇದೆ, ಇದೇ ರೀತಿ ಸುಮಾರು 9500 ಲಿಕ್ಕರ್ ಶಾಪ್‌ಗಳು ಇದೆ. ಆದರೆ ಏನಾಗಿದೆ ಎಂದರೆ ಹಳ್ಳಿಯಲ್ಲಿ ಹೆಣ್ಣುಮಕ್ಕಳು ಇವತ್ತು ಗೌರವಯುತವಾಗಿ ಬಾಳುವುದಕ್ಕೆ ಆಗುತ್ತಿಲ್ಲ. ಒಂದೊಂದು ಊರಿನಲ್ಲಿ 4–5.....

ಅಧ್ಯಕ್ಷರು :– ಮಾನ್ಯ ರೇವಣ್ಣನವರೆ, ಈ ರೀತಿಯಾಗುತ್ತಿದೆ. ಇದರ ಬಗ್ಗೆ ಗಮನ ಹರಿಸಿ ಎಂದು ಕೇಳಿ.

ಶ್ರೀ ಹೆಚ್.ಡಿ. ರೇವಣ್ಣ :– ನಾನು ಬೇಕಾದರೆ ಸದನದ ಗಮನ ಸೆಳೆಯುತ್ತೇನೆ. ಅದು ಯಾವ ರೀತಿ ಇದೆ ಎಂದು ಗೊತ್ತಿಲ್ಲ ಸರ್. ಹೆಣ್ಣುಮಕ್ಕಳು ಗೌರವಯುತವಾಗಿ ಇರುವುದಕ್ಕಾಗುತ್ತಿಲ್ಲ. ಅದಕ್ಕಾಗಿ ದಯಮಾಡಿ ತಾವು ಕಟ್ಟುನಿಟ್ಟಾಗಿ ಪೊಲೀಸ್ ಇಲಾಖೆ ಮತ್ತು ಅಬಕಾರಿ ಇಲಾಖೆಯವರು ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಈ ಬಗ್ಗೆ ಕೂಡಲೇ ಕ್ರಮ ತೆಗೆದುಕೊಂಡು ಹಳ್ಳಿಗಳಲ್ಲಿ ಯಾವ ಶಾಪ್‌ಗಳು ಇವೆ ಅದನ್ನು ತೆಗೆಯಬೇಕು. ಏನು ಲೀಗಲ್ ಆಗಿ ಇರುವಂತಹ ಶಾಪ್‌ಗಳಲ್ಲಿ ಮಾತ್ರ ಮದ್ಯ ಮಾರಾಟ ಮಾಡಬೇಕು. ನಾನು ಈ ವಿಷಯದ ಬಗ್ಗೆ ಮಾನ್ಯ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು :– ಮಾನ್ಯ ಶಿವಲಿಂಗೇಗೌಡರೆ, ತಾವು ಮಾತನಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ) :– ಸನ್ಮಾನ್ಯ ಅಧ್ಯಕ್ಷರೆ, ಈ ಅಕ್ರಮ ಮದ್ಯ ಮಾರಾಟದಿಂದ ಏನಾಗುತ್ತಿದೆ ಎಂದರೆ ಗ್ರಾಮಾಂತರ ಪ್ರದೇಶದಲ್ಲಿ ಒಂದೊಂದು ಊರಿನಲ್ಲಿ 5 ರಿಂದ 10 ಅಂಗಡಿಗಳು ಇವೆ. ಇವನ್ನು ತಡೆಗಟ್ಟಬೇಕೆಂದರೆ, ಈಗಿನ ಸರ್ಕಾರವನ್ನು ನಾನು ದ್ವೇಷ ಮಾಡುವುದಿಲ್ಲ. ನಾನು ಆವತ್ತು ಇದ್ದಂತಹ ಸರ್ಕಾರವನ್ನು ದ್ವೇಷ ಮಾಡುತ್ತೇವೆ. ಮಾಜಿ ಅಬಕಾರಿ ಸಚಿವರಾಗಿದ್ದ ಶ್ರೀ ರೇಣುಕಾಚಾರ್ಯರವರು ಮಂತ್ರಿಯಾಗಿದ್ದರು. ಆಡಳಿತ ಪಕ್ಷದಲ್ಲಿ ನಿಂತುಕೊಂಡು ನನ್ನ ಬಜೆಟ್ ನನ್ನ ಆದಾಯ 12,500 ಕೋಟಿ ರೂಪಾಯಿಗಳು ಎಂದು ಅವರು ಹೇಳಿದ್ದರು. ಇಷ್ಟು ಹಣಕ್ಕೆ 27500 ಕೇಸ್‌ಗಳನ್ನು ಕಡ್ಡಾಯವಾಗಿ ಮಾಡಿ ಮದ್ಯವನ್ನು ಮಾರಿಸಿರುವುದರಿಂದ ಅದು ಏನಾಗುತ್ತದೆ

ಎಂದರೆ ಅದು ನಿಂತಿಲ್ಲ. ಹಿಂದೆ ಆಗಿರುವಂತಹ ಪರಿಪಾಠ ಇನ್ನೂ ನಿಂತಿರುವುದಿಲ್ಲ. ಆದ್ದರಿಂದ ಇವತ್ತು ಏನಾಗುತ್ತಿದೆ ಎಂದರೆ ಪ್ರತಿ ಊರಿನಲ್ಲಿ ತಾಂಡಗಳಲ್ಲಿ, ಹಟ್ಟಿಗಳಲ್ಲಿ ಎಲ್ಲಿ ನೋಡಿದರೆ ಅಲ್ಲಿ, ಬೀದಿ, ಬೀದಿಗಳಲ್ಲಿ ಈ ಬ್ರಾಂದಿಯನ್ನು ಮಾರುತ್ತಿದ್ದಾರೆ. ಇದನ್ನು ಚಿಲ್ಲರೆ ಅಂಗಡಿಗಳಲ್ಲೂ ಸಹ ಮಾರುತ್ತಿದ್ದಾರೆ. ಆದ್ದರಿಂದ ತಾವು ದಯಮಾಡಿ ಆದಾಯಕ್ಕೋಸ್ಕರ ಇವತ್ತು ಬಡಜನತೆ ಏನು ಇದ್ದಾರೆ ಅವರು ಹಾಳಾಗುವಂತಹ ಸನ್ನಿವೇಶ ಬೇಡ. ಎಷ್ಟೋ ಜನರು ನಾವು ಪಂಚಾಯಿತಿ ಮಾಡುತ್ತೇವೆ.

ಅಧ್ಯಕ್ಷರು :– ಸಾಕು, ಸಾಕು, ಈಗ ನಾನೂ ಸಹ ನಮ್ಮೂರಿಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಮದ್ಯ ಮಾರಾಟ ಮಾಡುವುದನ್ನು ನಿಲ್ಲಿಸಬೇಕು.

ಶ್ರೀ ಕೆ.ಎಂ. ಶಿವಲಿಂಗೇಗೌಡ :– ಅದನ್ನು ನಿಲ್ಲಿಸುವುದಕ್ಕೆ ನಮ್ಮ ಕೈಯಲ್ಲಿ ಆಗುತ್ತದೆಯೇ ?

ಅಧ್ಯಕ್ಷರು :– ಅದನ್ನು ಸರ್ಕಾರ ಮಾಡಬೇಕು.

ಶ್ರೀ ಕೆ.ಎಂ. ಶಿವಲಿಂಗೇಗೌಡ :– ಅಬಕಾರಿ ಮಂತ್ರಿಗಳು ಮತ್ತು ಪೊಲೀಸ್ ಇಲಾಖೆಯವರು ಇಬ್ಬರೂ ಸೇರಿ ಈ ಬಗ್ಗೆ ಏನಾದರೂ ಮಾಡಿ ಗ್ರಾಮೀಣ ಪ್ರದೇಶದಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳು ಆದಾಯ ಕಡಿಮೆಯಾದರೂ ಸಹ ಆಗುತ್ತದೆ. ಬೇರೆಯದರಲ್ಲಿ ಏನಾದರೂ ಒಂದು ಚೂರು ಕಡಿಮೆ ಮಾಡೋಣ, ಜನರು ಕುಡಿದು ಕುಡಿದು ಮನೆಯನ್ನು ಹಾಳುಮಾಡಿಕೊಂಡು, ಎಲ್ಲಾ ಜನರು ನಿಜವಾಗಿಯೂ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಹೆಣ್ಣುಮಕ್ಕಳಿಗೆ ಬಹಳ ಗೋಳನ್ನು ಕೊಡುತ್ತಿದ್ದಾರೆ. ಆದ್ದರಿಂದ ದಯವಿಟ್ಟು ಕುಡಿಯುವುದನ್ನು ನಿಲ್ಲಿಸಬೇಕೆಂದರೆ ಸರ್ಕಾರವು ಈ ಬಗ್ಗೆ ಬಿಗಿಯಾಗಿ ಕ್ರಮ ತೆಗೆದುಕೊಳ್ಳಬಾರದು ಎಲ್ಲಿ ಎಷ್ಟು ಹೋಗುತ್ತದೆಯೋ, ಎಲ್ಲಿ ಸಿಎಲ್–2 ಕೊಟ್ಟಿದ್ದಾರೋ, ಎಂಎಸ್ಐಎಲ್‌ಗೆ ಕೊಟ್ಟಿದ್ದಾರೋ, ಏನು ಕೊಟ್ಟಿದ್ದಾರೋ ಅದರಲ್ಲಿ ಅಚ್ಚುಕಟ್ಟಾಗಿ ಕಾಲಮಿತಿಯೊಳಗೆ ಮಾರಿಕೊಂಡು ಹೋಗಿ ಎಂದು ಹೇಳಿದರೆ ಸಾಕು. ಎಷ್ಟು ವ್ಯಾಪಾರ ಆಗುತ್ತದೆಯೋ ಆಗಲಿ. ನೀವು ಇಷ್ಟು ಸಾವಿರ ಕೇಸ್‌ಗಳನ್ನು ಮಾರಲೇಬೇಕೆಂದು ತಾಕೀತು ಮಾಡಿದರೆ 100 ಕ್ಕೆ 100 ಭಾಗ ಅವನು ಏನು ಮಾಡುತ್ತಾನೆಂದರೆ target ರೀಚ್ ಆಗುವುದಕ್ಕೋಸ್ಕರ ಹಳ್ಳಿಗಳಲ್ಲಿ ಯಾರ್ಯಾರು ಮದ್ಯ ಮಾರುತ್ತಾರೆ ಅವರೆಲ್ಲರಿಗೂ ವ್ಯಾನ್‌ನಲ್ಲಿ ಸಪ್ಲೈ ಕೊಡುತ್ತಾರೆ. ಹಿಂದೆ ಸಾರಾಯಿ ಇದ್ದಾಗ ಹಳ್ಳಿಗಳಿಗೆ ವ್ಯಾನ್‌ನಲ್ಲಿ ಹೋಗಿ ಸಪ್ಲೈಯನ್ನು ಕೊಡುತ್ತಿದ್ದರು. ಮಾರುತಿ ವ್ಯಾನ್‌ನಲ್ಲಿ complete ಇಟ್ಟುಕೊಂಡು ಊರೂರಿಗೆ ನಿನಗೆ ಎಷ್ಟು ಕೇಸ್ ಬೇಕು ಎಂದು ಹಳ್ಳಿಗಳಲ್ಲಿ, ಎಲ್ಲಾ ಊರುಗಳಲ್ಲಿ ಇಳಿಸಿಕೊಂಡು ಹೋಗುತ್ತಿದ್ದರು. ಇದು ಅಗುವುದು ನಿಲ್ಲಬೇಕು. ಇದು ನಿಂತರೆ ಈಗ ಏನಾಗುತ್ತದೆ ಎಂದರೆ ನೀವು ಅಲ್ಲಿ ಕುಡಿಯುವುದಿಲ್ಲವೆ ಎಂದು ಹೇಳಬಹುದು. ಅರಸೀಕೆರೆಯಿಂದ ಹೊರಟರೆ ಹಳ್ಳಿಗಳಿಗೆ

ಹೋಗುವುದಕ್ಕಿಂತ ಮುಂಚೆ ಒಂದು ಕ್ವಾರ್ಟರ್ ಕುಡಿದು ಮೆನಗೆ ಹೋಗುತ್ತಾನೆ. ಅದು ಸಿಗದೇ ಹೋದರೆ ಸುಮ್ಮನೆ ಊಟಮಾಡಿಕೊಂಡು ಮಲಗುತ್ತಾನೆ. ಅದು ಸಿಗುತ್ತದೆ ಎಂದರೆ ಮತ್ತೆ ಎರಡು ಕ್ವಾರ್ಟರ್ ಏರಿಸುತ್ತಾನೆ. ಅದರಿಂದ ಏನಾಗುತ್ತದೆ ಎಂದರೆ ಅವನು ಸಾಲ ಮಾಡಿ ಮಾಡಿ ಕೊನೆಗೆ ಒಂದು ದಿವಸ ಕಷ್ಟದ ಪರಿಸ್ಥಿತಿಗೆ ಬಂದು ಸಿಕ್ಕಿಕೊಳ್ಳುತ್ತಾನೆ. ಮಾನ್ಯ ರೇಣುಕಾಚಾರ್ಯರವರು ಬಹಳ ಹುಂಬತನದಿಂದ ತೆಗೆದುಕೊಂಡು ಬಂದರು. ಇದನ್ನು ಆದಾಯವೆಂದು ಪರಿಗಣಿಸಬೇಡಿ, ಬಹಳ ಜನ ಬಡವರು ಹಾಳಾಗುತ್ತಾರೆ ಎಂದು ನಾನು ಅವರಿಗೆ ಬಹಳಷ್ಟು ಸಾರಿ ಹೇಳಿದ್ದೇನೆ. ಅವರು ಇಲ್ಲಾ ಇದು ಆದಾಯ ಆಗುತ್ತದೆ ಎಂದು ಹೇಳಿದರು. ಇದರಿಂದ ನಾನು 12,500 ಕೋಟಿ ರೂಪಾಯಿಗಳನ್ನು ಸರ್ಕಾರಕ್ಕೆ ಕೊಟ್ಟಿದ್ದೇನೆ ಎಂದು ಅವರು ಭಾಷಣವನ್ನು ಮಾಡಿದರು. ನಾನು ಇದನ್ನು ಒಪ್ಪುವುದಿಲ್ಲ. ಇದನ್ನು ತಾವು ಆದಾಯವೆಂದು ಪರಿಗಣಿಸಬೇಡಿ. ದಯವಿಟ್ಟು ಈ ಬಗ್ಗೆ ಮಾನವೀಯತೆಯ ದೃಷ್ಟಿಯಿಂದ ಮಾರಾಟ ಮಾಡುವುದನ್ನು ನಿಲ್ಲಿಸಿ. ಇನ್ನೊಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುವುದೇನೆಂದರೆ, ತಾವು ದಯವಿಟ್ಟು cheap liquorಗೆ ಈಗ ಹಾಕಿದ್ದೀರಲ್ಲ ಆ ಟ್ಯಾಕ್ಸ್ ಅನ್ನು ತಾವು ರದ್ದು ಮಾಡಬೇಕು. ತಾವು "A" class drinksಗಳಿಗೆ ಹಾಕಿ. ಅವರು ಯಾರು ಬೇಕಾದರೂ ಕುಡಿದುಕೊಳ್ಳಲಿ, ಬೇಕಾದರೆ ಅವರು ಟ್ಯಾಕ್ಸ್ ಅನ್ನು ಕಟ್ಟಿಕೊಳ್ಳಲಿ. ಈ cheap liquor ಗಳಿಗೆ ನಿಜವಾಗಿಯೂ ಹಾಕಿದರೆ ನೀವು ಏನು ಸಾಮಾಜಿಕವಾದಂತಹ ಕಳಕಳಿಯನ್ನು ಹೊಂದಿ ಸಾಮಾಜಿಕ ನ್ಯಾಯವನ್ನು ಕೊಡುತ್ತೇವೆ, ಭದ್ರತೆಯನ್ನು ಕೊಡುತ್ತೇವೆ ಎಂದು ತಾವು ಏನು ಹೇಳಿದ್ದೀರೋ ಅದು ನಿಜವಾಗಿಯೂ ಅವರ ದುಡ್ಡನ್ನು ತೆಗೆದು ಅವರಿಗೆ ಕೊಟ್ಟಂತೆ ಆಗುತ್ತದೆ. ಈಗ 8.00 ರೂಪಾಯಿ ಒಂದು ಕ್ವಾರ್ಟರ್ ಜಾಸ್ತಿಯಾಗುತ್ತದೆ.

ಅಧ್ಯಕ್ಷರು :– ಗೌಡರೆ, ಇದನ್ನೆ ಚರ್ಚೆ ಮಾಡಿಕೊಂಡು ಮುಂದುವರಿಯುವುದಾದರೆ ನಾನು ಈಗ ಸಭೆಯನ್ನು ಮುಂದಕ್ಕೆ ಹಾಕುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :– ಆಯಿತು. ನಾನು ಈಗ ಕುಳಿತುಕೊಂಡೆ.

ಅಧ್ಯಕ್ಷರು :– ಮಾನ್ಯ ಸಚಿವರೆ, ತಾವು ಹೇಳಿ.

ಶ್ರೀ ಸತೀಶ್ ಲಕ್ಷ್ಮಣರಾವ್ ಜಾರಕಿಹೊಳಿ (ಮಾನ್ಯ ಅಬಕಾರಿ ಸಚಿವರು) :– ಮಾನ್ಯ ಅಧ್ಯಕ್ಷರೆ, ಇದು ಗ್ರಾಮೀಣ ಪ್ರದೇಶದಲ್ಲಿ ಆಗುತ್ತಿರುವುದು ನಿಜ. ಇದು ಎಲ್ಲರಿಗೂ ಗೊತ್ತಿರುವಂತಹ ವಿಚಾರ. ಇದಕ್ಕೆ ಆರ್ಥಿಕ ಇಲಾಖೆ, ಪೊಲೀಸ್ ಇಲಾಖೆ, ಅಬಕಾರಿ ಇಲಾಖೆ ಸೇರಿ ಈ ಬಗ್ಗೆ ಅರಿತುಕೊಂಡು ಜಂಟಿಯಾಗಿ ಯೋಜನೆಯನ್ನು ಮಾಡಬೇಕಾಗಿದೆ. ಅದನ್ನು ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಎಲ್ಲಾ ಪಕ್ಷದವರನ್ನು ಕರೆದು ಇದಕ್ಕೊಂದು ಶಾಶ್ವತವಾದ ಪರಿಹಾರ ಮಾಡುವಂತಹ ಕೆಲಸವನ್ನು ಮಾಡುತ್ತೇವೆ.

ಅಧ್ಯಕ್ಷರು: ಈಗ ಮಾನ್ಯ ಸದಸ್ಯರಾದ ಶ್ರೀ ರೇವಣ್ಣನವರು, ಶಿವಲಿಂಗೇಗೌಡರು ಹೇಳಿದ್ದು ಅಬಕಾರಿ ಇಲಾಖೆ ಮತ್ತು ಪೊಲೀಸ್ ಇಲಾಖೆಯವರು ಇದನ್ನು ನಿಯಂತ್ರಣ ಮಾಡುವ ವಿಚಾರದಲ್ಲಿ ಸಾಕಷ್ಟು ಆಸಕ್ತಿಯನ್ನು ವಹಿಸುತ್ತಿಲ್ಲ. ದಯವಿಟ್ಟು ಚುರುಕುಗೊಳಿಸಿ strengthen ಮಾಡಿ ನಿರ್ದಾಕ್ಷಿಣ್ಯವಾಗಿ ಇದನ್ನು ನಿಲ್ಲಿಸಲಿಕ್ಕೆ ಏನು ಮಾಡಬೇಕೋ ಅದನ್ನು ಮಾಡಿ.

ಶ್ರೀ ಸತೀಶ್ ಲಕ್ಷ್ಮಣರಾವ್ ಜಾರಕಿಹೊಳಿ (ಮಾನ್ಯ ಅಬಕಾರಿ ಸಚಿವರು): ಆ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ನೀವು strict ಮಾಡಿ ಇಷ್ಟೇ ಮಾಡಬೇಕೆಂದಿದ್ದರೆ ಅದೇನೂ ಆಗುವುದಿಲ್ಲ. ಮಾಡಲೇಬೇಕು ಎಂದು ಕಡ್ಡಾಯ ಮಾಡಿದಾಗ ಇದೆಲ್ಲಾ ಆಗುತ್ತದೆ.

ಶ್ರೀ ಸತೀಶ್ ಲಕ್ಷ್ಮಣರಾವ್ ಜಾರಕಿಹೊಳಿ (ಮಾನ್ಯ ಅಬಕಾರಿ ಸಚಿವರು): ನಮ್ಮ ಇಲಾಖೆ ಹಾಗೂ ಆರ್ಥಿಕ ಇಲಾಖೆಯ controlಗೆ ಬರುವುದರಿಂದ ಅವರನ್ನು ನಾವು ಗಮನದಲ್ಲಿ ತೆಗೆದುಕೊಳ್ಳಬೇಕಾಗುತ್ತದೆ, ಆ ನಿಟ್ಟಿನಲ್ಲಿ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಮುಂದಿನದು ಅರ್ಧಗಂಟೆ ಕಾಲಾವಧಿ ಚರ್ಚೆ, ರೇವಣ್ಣನವರು, ಹೇಳಿ. ಇನ್ನು ಮೇಲೆ ಒಂದೊಂದೇ ಹಾಕುತ್ತೇನೆ, ನೋಡಿ,

ಶ್ರೀ ಹೆಚ್.ಡಿ. ರೇವಣ್ಣ: ಸರ್ ಹಾಕಿದ್ದೆ, ಅದು ಬರಬೇಕಲ್ಲ.?

ಅಧ್ಯಕ್ಷರು: ಓಕೆ.

8) ಅರ್ಧಗಂಟೆ ಕಾಲಾವಧಿ ಚರ್ಚೆ.

1) ವಿಷಯ: ರಾಜ್ಯದಲ್ಲಿ "ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯವೈಖರಿ" ಬಗ್ಗೆ ಚರ್ಚೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ): ರಾಜ್ಯದಲ್ಲಿ CET ಮತ್ತೆ ಕಾಮೆಡ್-ಕೆ ನಲ್ಲಿ ಏನಾಗುತ್ತದೆ ಎಂಬ ಬಗ್ಗೆ ಮೊನ್ನೆ ಒಂದು ಪ್ರಶ್ನೆಯನ್ನು ಹಾಕಿದ್ದೆನು. ರಾಜ್ಯದಲ್ಲಿ ಒಟ್ಟು 96,400 ಇಂಜಿನಿಯರಿಂಗ್ ಸೀಟುಗಳಲ್ಲಿ ಸಿಇಟಿ ಮುಖೇನ 43, 027 ಸೀಟು ಆಗಿದೆ. ಕಾಮೆಡ್-ಕೆ ಮೂಲಕ 2,328 ಸೀಟುಗಳನ್ನು ಭರ್ತಿ ಮಾಡುತ್ತಾರೆ ಮತ್ತು ಆಡಳಿತ ಮಂಡಳಿಯಿಂದ ಸುಮಾರು 23,088 ಸೀಟು ನಿಗದಿಯಾಗಿದೆ. ಒಟ್ಟು 96,460 ರಲ್ಲಿ ಸಿಇಟಿ, ಮೂಲಕ more than 50% 43,000 seats ಭರ್ತಿ ಆಗುತ್ತವೆ. ಉಳಿಕೆ